## ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ. ನ್ಯಾಯಾಲಯ, ಪಿರಿಯಾಪಟ್ಟಣ

**ಸಿ.ಸಿ. ಸಂಃ13/2017**

| | | | |
|---|---|---|---|
| **ಹೆಸರು** | ಕೆ ಸಿ ಸುಲೋಚನ | **ಪಿಡಬ್ಲೂ:** | 08 |
| **ತಂದೆ/ಗಂಡನ ಹೆಸರು** | ಎಂ.ಬಿ.ತಮ್ಮಯ್ಯ | | |
| **ವಯಸ್ಸು** | 67 ವರ್ಷ | | |
| **ಉದ್ಯೋಗ** | ನಿವೃತ್ತ ಶಿಕ್ಷಕಿ | | |
| **ವಾಸಸ್ಥಳ** | ಕುಶಾಲನಗರ | | |

**ದಿಃ 05.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಿದೆ.**

**ಮುಖ್ಯ ವಿಚಾರಣೆಃ ಶ್ರೀ. ಪಿರ್ಯಾದಿ ಪರ ವಕೀಲರಿಂದಃ**

1992 ನೆ ಇಸವಿಯಲ್ಲಿ ಗಿರಗೂರಿನ ಮಿಳಿಂದಾ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಕೆಲಸಕ್ಕೆ ಸೇರಿ 26 ವರ್ಷ ಕೆಲಸ ಮಾಡಿದ್ದೇನೆ. ನಾನು ಕೆಲಸಕ್ಕೆ ಸೇರಿದಾಗ ಆ ಸಂಸ್ಥೆಯಲ್ಲಿ 1 ರಿಂದ 3 ನೇ ತರಗತಿ ನಡೆಯುತ್ತಿತ್ತು ಆ ನಂತರ ಪ್ರತಿ ವರ್ಷ ಒಂದೊಂದು ತರಗತಿ ಪ್ರಾರಂಭವಾಗಿ 7 ನೇ ತರಗತಿಯವರೆಗೆ ನಡೆಯುತ್ತಿತ್ತು, ಈಗ 10 ತರಗತಿಯವರೆಗೆ ನಡೆಯುತ್ತಿದೆ. ನಾನು ಶಾಲೆಗೆ ಕೆಲಸಕ್ಕೆ ಸೇರಿದಾಗ ವಿದ್ಯಾರ್ಥಿಗಳಿಂದ ಶುಲ್ಕ ಮತ್ತು ಡೊನೇಷನ್ ಸಂಗ್ರಹಿಸುತ್ತಿರಲಿಲ್ಲ, 1995 ರಿಂದ 1 ರಿಂದ 4 ನೇ ತರಗತಿ ವಿದ್ಯಾರ್ಥಿಗಳಿಂದ ಶಿಕ್ಷಕರು ತಿಂಗಳಿಗೆ ತಲಾ 10 ರೂ ಸಂಗ್ರಹಿಸಲಾಗುತ್ತಿತ್ತು. 5 ರಿಂದ 7 ನೇ ತರಗತಿಯ ವಿದ್ಯಾರ್ಥಿಗಳಿಂದ ತಿಂಗಳಿಗೆ ತಲಾ 15 ರೂ ಸಂಗ್ರಹಿಸಲಾಗುತ್ತಿತ್ತು. ಆ ರೀತಿ ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸಿದಾಗ ನಾವು ರಶೀದಿ ನೀಡುತ್ತಿರಲಿಲ್ಲ. ಆ ರೀತಿ ಸಂಗ್ರಹಿಸಿದ ಹಣವನ್ನು ದೊಡ್ಡಣ್ಣ (ಆರೋಪಿ)ಯವರಿಗೆ ಕೊಡುತ್ತಿದ್ದೇವು. ಮೀಟಿಂಗ್ ಮಾಡಿ ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸಿ ನನಗೆ ಕೊಡಬೇಕೆಂದು ದೊಡ್ಡಣ್ಣನವರು ಹೇಳಿದ ಕಾರಣ ನಾನು ವಿದ್ಯಾರ್ಥಿಗಳಿಂದ ಶುಲ್ಕ ಸಂಗ್ರಹಿಸಿ ನಾನು ಮುಖ್ಯೋಪಾಧ್ಯಾಯರಿಗೆ ಕೊಡುತ್ತಿದ್ದೆ. ಮುಖ್ಯೋಪಾಧ್ಯಾಯರು ಆ ಹಣವನ್ನು ದೊಡ್ಡಣ್ಣನವರಿಗೆ

ಕೊಡುತ್ತಿದ್ದರು. ಆ ನಂತರ ಶಾಲೆಗೆ ವ್ಯಾನ್ ತೆಗೆದುಕೊಳ್ಳಬೇಕೆಂದು 7 ಜನ ಶಿಕ್ಷಕರಿಂದ ತಲಾ ರೂ.25,000/- ರೂ ಕೊಡಬೇಕೆಂದು ದೊಡ್ಡಣ್ಣನವರು ಹೇಳಿದ್ದರು. ಅದರಂತೆ ನಾನು ರೂ.25,000/- ಹಣವನ್ನು ದೊಡ್ಡಣ್ಣನವರ ಕೈಗೆ ಕೊಟ್ಟಿದ್ದೇನೆ. ಪುನಃ ವ್ಯಾನ್ ಖರೀದಿಸಿದ್ದ ಬಗ್ಗೆ ಪ್ರತಿ ತಿಂಗಳು ರೂ.14,000/- ಇಎಂಐ ಕಟ್ಟಲು 7 ಜನ ಶಿಕ್ಷಕರು ಹಣ ಕೊಡಬೇಕೆಂದು ಹೇಳಿದ್ದರು. ಅದರಂತೆ ನಾವೆಲ್ಲರೂ 3 ವರ್ಷಗಳವರೆಗೆ 7 ಜನ ಶಿಕ್ಷಕರು ಸೇರಿ ರೂ.99,500/- ಆರೋಪಿಗೆ ಕೊಟ್ಟಿದ್ದೇವೆ. ಆದ್ದರಿಂದ ಈ ಬಗ್ಗೆ ಬರವಣಿಗೆಯಲ್ಲಿ ನಿ.ಪಿ-18 ರಂತೆ ಪಿರ್ಯಾದಿಯವರಿಗೆ ಮಾಹಿತಿ ಕೊಟ್ಟಿದ್ದೇವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಸದರಿ ಸಾಕ್ಷಿಯ ಸಹಿಯನ್ನು ನಿ.ಪಿ-18(ಇ) ಎಂದು ಗುರುತಿಸಲಾಯಿತು. ಈ ಬಗ್ಗೆ ವಿಚಾರಣಾಧಿಕಾರಿಯಾಗಿದ್ದ ಸಿದ್ದೇಗೌಡರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ಪಡೆದಿದ್ದಾರೆ. ಸದರಿ ಹೇಳಿಕೆಯನ್ನು ಈಗಾಗಲೇ ನಿ.ಪಿ-41(ಸಿ) ಹಾಗೂ ಸಾಕ್ಷಿಯ ಸಹಿಯನ್ನು ನಿ.ಪಿ-41(ಸಿ1) ಎಂದು ಗುರುತಿಸಲಾಗಿದೆ.

ಶಾಲಾ ಅಭಿವೃದ್ಧಿ ಶುಲ್ಕವೆಂದು 1 ರಿಂದ 4 ನೇ ವಿದ್ಯಾರ್ಥಿಗಳಿಂದ ವಾರ್ಷೀಕವಾಗಿ ತಲಾ ರೂ.200/- ಮತ್ತು 5 ರಿಂದ 7 ನೇ ತರಗತಿ ವಿದ್ಯಾರ್ಥಿಗಳಿಂದ ರೂ.300/- ಸಂಗ್ರಹಿಸಲಾಗುತ್ತಿತ್ತು. ಅಭಿವೃದ್ಧಿ ಶುಲ್ಕ ಸಂಗ್ರಹಿಸುವಂತೆ ದೊಡ್ಡಣ್ಣನವರು ಹೇಳಿದ್ದರು. ಸಂಗ್ರಹಿಸಲಾದ ಅಭಿವೃದ್ಧಿ ಶುಲ್ಕವನ್ನು ದೊಡ್ಡಣ್ಣನವರಿಗೆ ಕೊಡುತ್ತಿದ್ದೇವು. ಆ ಬಗ್ಗೆ ದೊಡ್ಡಣ್ಣನವರು ರಶೀದಿ ಕೊಡುತ್ತಿರಲಿಲ್ಲ. 2006 ನೇ ಇಸವಿಯವರೆಗೆ ಶಾಲಾ ಅಭಿವೃದ್ಧಿ ಶುಲ್ಕ ಮತ್ತು ಶುಲ್ಕ ಸಂಗ್ರಹಿಸಲಾಗುತ್ತಿತ್ತು.

2006 ರಲ್ಲಿ ಗೋವಿಂದಯ್ಯ, ದೊಡ್ಡಣ್ಣ, ಆಡಿಟರ್ ನಾಗಾನಂದ ಮತ್ತು ಶಿಕ್ಷಕರು ಇವರೆಲ್ಲರೂ ಮೀಟಿಂಗ್ ಮಾಡಿ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶುಲ್ಕ ಮತ್ತು ಅಭಿವೃದ್ಧಿ ಶುಲ್ಕಕ್ಕೆ ರಶೀದಿ ಕೊಡಬೇಕೆಂದು ತೀರ್ಮಾನಿಸಲಾಯಿತು ಮತ್ತು ಆ ರೀತಿ ಸಂಗ್ರಹಿಸಲಾದ ಹಣವನ್ನು ಬ್ಯಾಂಕ್ ಗೆ

ಹಾಕಬೇಕೆಂದು ತೀರ್ಮಾನಿಸಲಾಯಿತು. ನಂತರ ದೊಡ್ಡಣ್ಣನವರು ಹಣ ಬ್ಯಾಂಕ್ ಗೆ ಹಾಕುವುದು ಬೇಡ ನನಗೆ ಕೊಡಿ ಎಂದು ಹೇಳಿದ್ದರು. ಅದೇ ಹಣದಲ್ಲಿ ಶಿಕ್ಷಕರಿಗೆ ವೇತನ ಕೊಡುತ್ತಿದ್ದರು. 2009 ರಲ್ಲಿ ಪಿರ್ಯಾದಿ ಆರೋಪಿ ಮತ್ತು ಆಡಿಟರ್ ನಾಗಾನಂದ ಮತ್ತು ಶಿಕ್ಷಕರೆಲ್ಲರೂ ಒಂದು ಮೀಟಿಂಗ್ ಮಾಡಿ ಮಕ್ಕಳಿಂದ ಸಂಗ್ರಹಿಸಲಾದ ಹಣಕ್ಕೆ ರಶೀದಿ ಕೊಡಬೇಕು ಮತ್ತು ಆ ಹಣವನ್ನು ಬ್ಯಾಂಕ್ ಖಾತೆಗೆ ಹಾಕಬೇಕೆಂದು ತೀರ್ಮಾನಿಸಲಾಯಿತು. ಪ್ರಾಥಮಿಕ ಶಾಲೆ, ಪ್ರೌಢ ಶಾಲೆ ಮತ್ತು ಮಿಳಿಂದಾ ವಿದ್ಯಾಸಂಸ್ಥೆಯ ಹೆಸರಿನಲ್ಲಿ ಇರುವ ಬ್ಯಾಂಕ್ ಖಾತೆಗೆ ಹಣ ಜಮೆ ಮಾಡಬೇಕೆಂದು ತೀರ್ಮಾನಿಸಲಾಯಿತು ಮತ್ತು ಯಾರು ಯಾರಿಗೆ ಯಾವ ಜವಾಬ್ದಾರಿ ವಹಿಸಬೇಕೆಂಬುದವರ ಬಗ್ಗೆ ನಿ.ಪಿ–8 ರಂತೆ ಒಂದು ಸುತ್ತೋಲೆ ಹೊರಡಿಸಲಾಯಿತು. ಸದರಿ ದಾಖಲೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ–8(ಇ) ಎಂದು ಗುರುತಿಸಲಾಯಿತು. 2009 ರಿಂದ ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಹಣವನ್ನು ಬ್ಯಾಂಕ್ ಖಾತೆಗೆ ಹಾಕುತ್ತಿದ್ದೇವು. ದೊಡ್ಡಣ್ಣನವರ ಮಾವ ಚೆನ್ನಯ್ಯ ಸಪೋಟ ಗಿಡ ಮತ್ತು ಸೀಬೆ ಗಿಡಗಳನ್ನು ಕತ್ತರಿಗೆ ಆ ಜಾಗದಲ್ಲಿ ಶುಂಠಿ ಮತ್ತು ಜೋಳ ಬೆಳೆಯುತ್ತಿದ್ದರು. ಆದ್ದರಿಂದ ವ್ಯವಸ್ಥಾಪಕ ಧರ್ಮದರ್ಶಿರವರಿಗೆ ಮಾಹಿತಿ ಕೊಟ್ಟಿದ್ದೇವೆ. ಸಂಸ್ಥೆಯಲ್ಲಿದ್ದ ಪಾತ್ರೆಗಳನ್ನು ದೊಡ್ಡಣ್ಣನವರು ಅವರ ಮನೆಗೆ ತೆಗೆದುಕೊಂಡು ಹೋಗಿದ್ದರು. ಅದರ ಬಗ್ಗೆ ಧರ್ಮದರ್ಶಿರವರಿಗೆ ನಿ.ಪಿ–29(ಸಿ) ರಂತೆ ಮಾಹಿತಿ ಕೊಟ್ಟಿದ್ದೇವೆ. ಸದರಿ ದಾಖಲೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ–29(ಜಿ) ಎಂದು ಗುರುತಿಸಲಾಯಿತು. ವಿದ್ಯಾಸಂಸ್ಥೆ ಅನುದಾನದ ಬಗ್ಗೆ ವ್ಯವಸ್ಥಾಪಕದ ಧರ್ಮದರ್ಶಿರವರಿಗೆ ನಿ.ಪಿ–29(ಇ) ಪ್ರಕಾರ ಅರ್ಜಿ ಕೊಟ್ಟಿದ್ದೇವೆ. ಸದರಿ ದಾಖಲೆಯಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ–29(ಹೆಚ್) ಎಂದು ಗುರುತಿಸಲಾಯಿತು. ದೊಡ್ಡಣ್ಣನವರ ಮಾವ ಚೆನ್ನಯ್ಯ ಅಸಭ್ಯವಾಗಿ ಮಾತನಾಡಿರುವ ಬಗ್ಗೆ ವ್ಯವಸ್ಥಾಪಕದ ಧರ್ಮದರ್ಶಿರವರಿಗೆ ಅರ್ಜಿ ಕೊಟ್ಟಿದ್ದೇವೆ, ಸದರಿ ನಿ.ಪಿ–29(ಐ) ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ–

29(ಜೆ) ಎಂದು ಗುರುತಿಸಲಾಯಿತು. ವಿದ್ಯಾರ್ಥಿಗಳಿಂದ ಸಂಗ್ರಹಿಸಲಾದ ಶುಲ್ಕಕ್ಕೆ ವಿದ್ಯಾರ್ಥಿಗಳು ರಶೀದಿ ಕೇಳುತ್ತಿದ್ದರು ಆದ್ದರಿಂದ ವ್ಯವಸ್ಥಾಪಕದ ಧರ್ಮದರ್ಶಿರವರಿಗೆ ನಿ.ಪಿ–29(ಜಿ) ಪ್ರಕಾರ ಅರ್ಜಿ ಕೊಟ್ಟಿದ್ದೆ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ–29(ಆರ್) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

*(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)*

**ಓ.ಹೆ.ಕೆ.ಸರಿ ಇದೆ.**

**ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ**